8. ಸಂವಿಧಾನ ತಿದ್ದುಪಡಿ ಸ್ಥಿರೀಕರಣ ನಿರ್ಣಯ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಈ ಕೆಳಕಂಡ ನಿರ್ಣಯವನ್ನು ಸ್ಥಿರೀಕರಿಸಬೇಕೆಂದು ಕೋರಿ ಸಭೆಯ ಮುಂದೆ ಮಂಡಿಸಬಯಸುತ್ತೇನೆ. ಪ್ರಸ್ತಾಪ ಏನೆಂದರೆ, "ಸಂಸತ್ತಿನ ಎರಡೂ ಸದನಗಳ ಮೂಲಕ ಅಂಗೀಕರಿಸಲಾದಂತೆ ಸಂವಿಧಾನ (ತೊಂಭತ್ತೈದನೇ ತಿದ್ದುಪಡಿ) ವಿಧೇಯಕ, 2003ರಲ್ಲಿ ಮಾಡಲು ಉದ್ದೇಶಿಸಿರುವ ಭಾರತ ಸಂವಿಧಾನದ 368ನೇ ಅನುಚ್ಛೇದ(2)ನೇ ಖಂಡದ ಪರಂತುಕದ (ಸಿ) ಖಂಡದ ವ್ಯಾಪ್ತಿಯೊಳಗೆ ಬರುವ ತಿದ್ದುಪಡಿಗಳನ್ನು ಈ ಸದನವು ಅಂಗೀಕರಿಸುತ್ತದೆ."

ಉಪಾಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಸಂವಿಧಾನ ತಿದ್ದುಪಡಿಗಾಗಿ ಈ ಒಂದು ಠರಾವನ್ನು ಮಂಡನೆ ಮಾಡಿದ್ದೇವೆ. ಆ ಠರಾವು ಸಂಸತ್ತಿನ ಎರಡೂ ಸದನಗಳು ತಮ್ಮ ಅಧಿಕಾರದ ವ್ಯಾಪ್ತಿಯಲ್ಲಿ ಬರುವ ರಾಜ್ಯಾಂಗದ 368ನೇ ನಿಯಮವನ್ನು ಒಪ್ಪಿಕೊಂಡು ಅದರ ಪ್ರಕಾರ service taxes ಮೊದಲು ಇರಲಿಲ್ಲ. ಇತ್ತೀಚೆಗೆ ಆ service tax ಹಾಕುವ ಪ್ರಕ್ರಿಯೆ ನಡೆದಿದೆ. ಆ service tax ಹಾಕಲು ಅಧಿಕಾರ ಇರಲಿಲ್ಲ, entry one and two ನಲ್ಲಿಲ್ಲದೇ ಇರುವ ಕಾರಣ, 97ನೇ entry ಯಲ್ಲೇನಿತ್ತು ಅದನ್ನು ಈಗ ನಾವು ಶಾಸನಬದ್ಧವಾಗಿ ಮಾಡಬೇಕಾಗಿದೆ.

ಶ್ರೀ ಬಿ. ಸೋಮಶೇಖರ್ : ಕೇಂದ್ರ ಸರ್ಕಾರದವರು ಹೇಳಿದ್ದಕ್ಕೆ 50% states ratify ಮಾಡಬೇಕಾಗುತ್ತದೆ. ನನಗೆ ಗೊತ್ತಾದ ಪ್ರಕಾರ ಕೇರಳದವರು ಇದನ್ನು ಒಪ್ಪಿಕೊಂಡಿಲ್ಲ. ಕೇಂದ್ರ ಸರ್ಕಾರ ಎಷ್ಟು ಪರ್ಸೆಂಟ್ ನಮ್ಮ ರಾಜ್ಯಕ್ಕೆ ಕೊಡುತ್ತಾರೆ ಎಷ್ಟು ಪರ್ಸೆಂಟ್ ತಾವು ಇಟ್ಟುಕೊಳ್ಳುತ್ತಾರೆ ಎಂಬುದು ಇನ್ನೂ ನಮಗೆ ಗೊತ್ತಿಲ್ಲ. ನಮ್ಮ ಡಿಮಾಂಡ್ ಇರಬೇಕು: 75% state ಗಿರಬೇಕು. 25% central ಇಟ್ಟುಕೊಳ್ಳಲಿ ಎಂಬ ವಾದವನ್ನು ತಾವು ಮಾಡಿದರೆ ಬಹಳ ಒಳ್ಳೆಯದು. ಅವರು ಅದೇ ಡಿಮಾಂಡನ್ನಿಟ್ಟಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ : ಡೆವಲ್ಯೂಷನ್ ಹೇಗಾಗಬೇಕು ಎಂಬುದು ಮುಂದೆ ಶಾಸನ ಮಾಡುವ ಕಾಲದಲ್ಲಿ ಚರ್ಚೆ ಮಾಡುವ ವಿಚಾರ. ಈಗ ಸಂವಿಧಾನದಿಂದ ನಾವೇನು ಅಧಿಕಾರ ಕೊಡುತ್ತಾ ಇದ್ದೇವೆ, ಆ ಅಧಿಕಾರವನ್ನು ಬಳಕೆ ಮಾಡಿಕೊಂಡು ಶಾಸನ ಮಾಡುವಾಗ ತಾವು ಹೇಳಿದ್ದನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ. ಆದ್ದರಿಂದ ಈ ಠರಾವನ್ನು ಪಾಸು ಮಾಡಿಕೊಡಬೇಕೆಂದು ಕೋರುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಉಪಾಧ್ಯಕ್ಷರೇ, ಈ ಸಂವಿಧಾನ ತಿದ್ದುಪಡಿ ಠರಾವನ್ನು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಮಂಡಿಸಿದಂತಹ ಸಂದರ್ಭದಲ್ಲಿ ನಮಗೆ ಸ್ಪಷ್ಟವಾದ ವಿವರಣೆ ಕೊಟ್ಟಿದ್ದರೆ ಇಷ್ಟು ದಿನ ಇದು ತಡವಾಗುತ್ತಿರಲಿಲ್ಲ. ಅದಾದ ಮೇಲೆ ನಾನು ಕೇಂದ್ರ ಸರ್ಕಾರದ ಅಧಿಕಾರಿಗಳು ರಾಜ್ಯ ಸರ್ಕಾರದ ಅವರ ಇಲಾಖೆಯ ಅಧಿಕಾರಿಗಳ ಜೊತೆ ನಾನು ಮಾತನಾಡಿದೆ, ಈಗಾಗಲೇ service tax ಇದೆ, ಆದರೆ ಇದನ್ನು ಯಾವರೀತಿ devolution ಮಾಡಿಕೊಳ್ಳಬೇಕು state share central share ಗಳು ಏನಿರಬೇಕೆಂಬುದು

act they are amending the constitution, ಆದ್ದರಿಂದ ನಮ್ಮದು ಯಾವುದೇ ರೀತಿಯ ತಕರಾರಿಲ್ಲ. ಇದರಿಂದ ಒಳ್ಳೆಯದಾಗುತ್ತದೆ,.

5.10 ಪಿ ಎಂ

ಈಗಾಗಲೇ ಏನೇನು ಟ್ಯಾಕ್ಸಸ್ ಇದೆ, ಇದೊಂದು ಫಾರ್ಮುಲೇಟ್ ಆಗಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ ಹಣ ಬರುವುದಕ್ಕೆ ಅನುಕೂಲವಾಗುತ್ತದೆ. ಮತ್ತೆ ಸರ್ವೀಸ್ ಟ್ಯಾಕ್ಸಸ್, ನಮ್ಮ ಟ್ಯಾಕ್ಸು ಬೇಸ್ ನ್ನು ನಾವು ಜಾಸ್ತಿ ಮಾಡಿಕೊಳ್ಳುವ ದೃಷ್ಟಿಯಿಂದಾಗಿ ನಮಗೆ ಈಗ ಈ ಗ್ಲೋಬಲೈಜೇಷನ್, ಪ್ರೈವೇಟೈಜೇಷನ್ ಇದರ ಹಿನ್ನೆಲೆಯಲ್ಲಿ ಸರ್ವೀಸ್ ಟ್ಯಾಕ್ಸ್ ಗಳು ಇನ್ ವಿಟಬಲ್ ಆಗುತ್ತವೆ. ಇದು ಆಗಲೇಬೇಕಾಗುತ್ತದೆ. ಸರ್ವೀಸ್ ಸೆಕ್ಟಾರ್ ಸಹಿತ ಬಹಳ ಜಾಸ್ತಿಯಾಗುತ್ತದೆ. ಜಿಡಿಪಿಯಲ್ಲಿ ಸರ್ವೀಸ್ ಟ್ಯಾಕ್ಸಸ್ ಇನ್‌ಕಂ ಸಹಿತ ಬಹಳ ಜಾಸ್ತಿ ಇದೆ. 48 ಪರ್ ಸೆಂಟ್ ಇದೆ. ಹೀಗಾಗಿ ಇದು ಅನಿವಾರ್ಯ ಇದೆ. ಇದರ ವಿವರಣೆಯನ್ನು ಬಹುಶಃ ಅವತ್ತು ನಮಗೆ ತಲುಪಿದ್ದಿದ್ದರೆ ಅವತ್ತೇ ನಾವು ಇದಕ್ಕೆ ಒಪ್ಪಿಗೆಯನ್ನು ಕೊಡುತ್ತಿದ್ದೆವು. ಆಮೇಲೆ ನಮಗೆ ಇದು ಗೊತ್ತಾಗಲಿಲ್ಲ. ಇದರ ಬಗ್ಗೆ ತಿಳಿದುಕೊಂಡಿದ್ದು ಒಳ್ಳೆಯದಾಯಿತು. ಎರಡು ಮೂರು ದಿವಸ ಡಿಲೇ ಮಾಡಿದ್ದರಿಂದ ಸ್ವಲ್ಪ ಓದಿಕೊಂಡು ನಾಲ್ಕು ಜನ ಇದರ ಬಗ್ಗೆ ತಿಳಿವಳಿಕೆ ಇರುವವರ ಹತ್ತಿರ ನಾವು ಚರ್ಚೆ ಮಾಡಲಿಕ್ಕೆ ಅನುಕೂಲವಾಯಿತು. ಇದನ್ನು ಸರ್ವಾನುಮತದಿಂದ ಮಾಡಲಿಕ್ಕೆ ಯಾರದು ಅಡ್ಡಿ ಇರಬಾರದು ಎಂದು ನನ್ನ ಅಭಿಪ್ರಾಯ ಸ್ವಾಮಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಉಪಾಧ್ಯಕ್ಷರೇ, ನನಗೆ ಬೆಳಿಗ್ಗೆ ಚರ್ಚೆ ಮಾಡಿದ್ದರ ಬಗ್ಗೆ ಒಂದು ಕ್ಲಾರಿಫಿಕೇಷನ್ ಆದಮೇಲೆ ಇದರ ಬಗ್ಗೆ ಸ್ವಲ್ಪ ಮಾತನಾಡಬೇಕು ಎಂದು ಅನ್ನಿಸಿತು. ಏಕೆಂದರೆ, ಬೆಳಿಗ್ಗೆ ಮಾನ್ಯ ಸೋಮಶೇಖರ್ ರವರು ಇಂಟ್ರಡ್ಯೂಸ್ ಮಾಡಿದ ತಿದ್ದುಪಡಿ ಏನು ಇದೆ, ಈಗ ಒಂದು ತಿದ್ದುಪಡಿಯನ್ನು ಅವರು ಇಂಟ್ರಡ್ಯೂಸ್ ಮಾಡಿದಾಗ ಇಂಟ್ರಡ್ಯೂಸ್ ಮಾಡಿದವರು ಮಾತ್ರ ಅದರ ಬಗ್ಗೆ ಮಾತನಾಡಬೇಕೆಂದಾದರೆ ಪ್ರಾಯಶಃ ಇದರಲ್ಲಿ ಇಂಟ್ರಡ್ಯೂಸ್ ಮಾಡಿದ ಸಚಿವರು ಮಾತ್ರ ಅದರ ಬಗ್ಗೆ ಮಾತನಾಡಬೇಕೆಂದರೆ ಪ್ರಾಯಶಃ ಇದರಲ್ಲಿ ಇಂಟ್ರಡ್ಯೂಸ್ ಮಾಡಿದ ಸಚಿವರು ಮಾತ್ರ ಚರ್ಚೆ ಮಾಡಬೇಕೇ ಎಂದು ಹೇಳಬೇಕಾಗುತ್ತದೆ. ಈಗ ಯಾವುದೇ ಒಂದು ಶಾಸನದ ಬಗ್ಗೆ ಚರ್ಚೆಯನ್ನು ಮಾಡಬೇಕಾದರೆ ಯಾರು ಇಂಟ್ರಡ್ಯೂಸ್ ಮಾಡುತ್ತಾರೆ, ಅವರು ಮಾತ್ರ ಮಾತನಾಡಬೇಕೆಂದಾದರೆ ಕೇವಲ ಸಚಿವರು ಮಾತ್ರ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಎಲ್ಲರೂ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಬೆಳಿಗ್ಗೆ ಈ ಸದನದಲ್ಲಿ ನಡೆದದ್ದಕ್ಕೆ ನನಗೇನೋ ಅದು ಸರಿಕಾಣಲಿಲ್ಲ. ನನ್ನ ಮನಸಿನಲ್ಲಿದ್ದ ನೋವನ್ನು ನಾನು ತೋಡಿಕೊಳ್ಳುತ್ತಿದ್ದೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ (ತಿಕೋಟ) : ಮಾನ್ಯ ಉಪಾಧ್ಯಕ್ಷರೇ, ಆ ವಿಷಯ ಬೇರೆ ಇದ್ದರೂ ಇದು ಮಾತ್ರ ಸಿಮಿಲಾರಿಟಿ ಒಂದೇ ಇದೆ. ಏಕೆಂದರೆ ಯಾವುದೇ ಬಿಲ್ಲನ್ನು ಅಥವಾ ಅಮೆಂಡ್ ಮೆಂಟನ್ನು ಮೂವ್ ಮಾಡಿದಮೇಲೆ ಪ್ರಿಲಿಮಿನರಿ ಸಬ್ ಮಿಷನ್‌ಗೂ

ನೀವು ಅವಕಾಶ ಕೊಡುವುದಿಲ್ಲ ಎಂದು ಹೇಳತಕ್ಕ ಮಾತು ಛೇರ್ ನಿಂದ ಬಂದರೆ, it is not going to curtail the property of the House?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷರೇ, ಮಸೂದೆ ಬೇರೆ. ಮಸೂದೆಯ ವ್ಯಾಪ್ತಿಯಲ್ಲಿ ತಂದಿರತಕ್ಕಂಥ ರೂಲ್ ಎಂದು ಏನು ಹೇಳುತ್ತೇವೆ ಅದು ಬೇರೆ. ಬೆಳಿಗ್ಗೆ ಚರ್ಚೆ ಮಾಡಿದಂಥ ಮಸೂದೆ Act of parliament; i.e., central Act. Please bear it in mind ಅದು 1999ನೇ ಇಸವಿಯಲ್ಲಿ ಬಂದದ್ದು. ಅದಕ್ಕೆ ನಾವು ಈಗ ರೂಲ್ಸ್ ತಂದಿದ್ದೇವೆ. ಆ ರೂಲ್ಸ್‌ನ್ನು ತರತಕ್ಕ ಅಧಿಕಾರ ಸರ್ಕಾರಕ್ಕೆ ಇದೆ. ಅದನ್ನು ನಾರ್ಮಲ್ ಆಗಿ ಸದನದ ಮುಂದೆ ಪ್ಲೇಸ್ ಮಾಡಬೇಕು ಅಷ್ಟೆ.

ಶ್ರೀ ಶಿವಾನಂದ ಪಾಟೀಲ್ : ಶ್ರೀ ಜಯಪ್ರಕಾಶ್ ಹೆಗಡೆಯವರು ತಿದ್ದುಪಡಿ ಬಗ್ಗೆ ಕೇಳಲಿಲ್ಲ. ಬೆಳಿಗ್ಗೆ ರೂಲ್ಸ್ ಬಗ್ಗೆ ಆದ ಡಿಸ್ಕಷನ್ ವಿಚಾರ ಹೇಳಿದರು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷರೇ, ನೀವು ಪೂರ್ತಿ ಕೇಳಿ. ಅವಸರವಾಗಿ ಎದ್ದುನಿಂತುಕೊಂಡುಬಿಟ್ಟರೆ ನಾನೇನು ಹೇಳಲಿ. ಎಲ್ಲರೂ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡು ತಿಳಿದುಕೊಳ್ಳಬೇಕಲ್ಲಾ. ಆ ರೂಲ್ಸ್‌ಗೆ ಅಮೆಂಡ್ ಮೆಂಟನ್ನು ತಂದಾಗ ಅದರಲ್ಲಿ ಏನು ಹೇಳುತ್ತಾರೆ ಎಂದರೆ "A Member" ಎನ್ನುತ್ತಾರೆ. ನಮ್ಮ ರೂಲ್ಸ್‌ನಲ್ಲಿ ಅದರ ಪ್ರಕಾರ ಒಬ್ಬರೇ ಮೆಂಬರ್ ಆಗುತ್ತಾರೆ. ಬೇರೆಯವರು ಮಾತನಾಡುವುದಕ್ಕೆ ಅವಕಾಶ ಇಲ್ಲ. ನಾನು ನೋಟೀಸ್ ಕೊಟ್ಟು ಮಾತನಾಡಲಿ ಎಂದು ಹೇಳಿದೆ, ಮಾತನಾಡಬಾರದು ಎಂದು ಹೇಳಲಿಲ್ಲ. ತಾವು ಅದನ್ನು ತಪ್ಪಾಗಿ ಅರ್ಥೈಸುವುದೂ ಬೇಡ. ಅದು ಬೇರೆ. ಇವತ್ತು ತಂದಿರತಕ್ಕಂಥದ್ದು ಸಂವಿಧಾನದ ತಿದ್ದುಪಡಿ. ಆ್ಯಕ್ಟ್ ಅಲ್ಲ; ರೂಲ್ಸ್ ಅಲ್ಲ. ಈ ಸಂವಿಧಾನದ ತಿದ್ದುಪಡಿ ಏಕೆ ಬಂತು ಎಂಬುದಕ್ಕೆ ಕಾರಣಗಳನ್ನು ಹೇಳಿದ್ದೇನೆ. ಶ್ರೀಮಾನ್ ಸಿಂಧ್ಯಾರವರು ಹೇಳಿದ ಹಾಗೆ ಇದನ್ನು ಒಮ್ಮತದಿಂದ ಒಪ್ಪಿಕೊಳ್ಳಬೇಕು. ಮೊದಲು ಸರ್ವೀಸ್ ಟ್ಯಾಕ್ಸ್ ಗಳೇ ಇರಲಿಲ್ಲ ಅಂದರೆ, 1994–95ನೇ ಇಸವಿಯಲ್ಲಿ ಆಗಿನಿಂದಲೂ ಟ್ಯಾಕ್ಸ್ ಹಾಕುತ್ತಿದ್ದಾರೆ. ಸುಮಾರು 70 ಐಟಂಗಳಿಗೆ ಸರ್ವೀಸ್ ತೆರಿಗೆ ಎಂದು ಹಾಕುತ್ತಾರೆ. ಆ ತೆರಿಗೆ ಹೇಗೆ ಹಂಚಿಕೆಯಾಗಬೇಕೆನ್ನುವುದನ್ನು ಅಲ್ಲಿ ಮಾಡತಕ್ಕ ಶಾಸನದಲ್ಲಿ ತರುತ್ತೇವೆ. ಇವತ್ತು ಸಂವಿಧಾನ ತಿದ್ದುಪಡಿಯನ್ನು ಏನು ತಂದಿದ್ದಾರೆ, ಅದಕ್ಕೆ ಸುಮಾರು ಶೇಕಡ 50ರಷ್ಟು ರಾಜ್ಯಗಳು ಒಪ್ಪಿಗೆಯನ್ನು ಕೊಡಬೇಕು. ಈಗಾಗಲೇ ನನಗೆ ಬಂದಿರುವ ಮಾಹಿತಿ ಪ್ರಕಾರ ಸುಮಾರು 15 ರಾಜ್ಯಗಳು ಒಪ್ಪಿಗೆಯನ್ನು ಕೊಟ್ಟಿವೆ, ಎಂದು ಹೇಳಿ ನಾನು ತಿಳಿದುಕೊಂಡಿದ್ದೇನೆ. ಅದರಿಂದ ನಮ್ಮ ರಾಜ್ಯವೂ ಇದಕ್ಕೆ ಒಪ್ಪಿಗೆಯನ್ನು ಕೊಡಬೇಕು ಎಂದು ಹೇಳಿ ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ನಮ್ಮ ಒಪ್ಪಿಗೆ ಇದೆ. ಇದು ಮಾನ್ಯ ಯಶವಂತ್ ಸಿನ್ಹಾ ಅವರು ಇದ್ದಾಗಲೇ ಬಂದ ಬಿಲ್, ಇದಕ್ಕೆ ಎಲ್ಲರ ಒಪ್ಪಿಗೆಯೂ ಇದೆ. ಆದರೆ ಶ್ರೀ ಜಯಪ್ರಕಾಶ್ ಹೆಗಡೆಯವರು ಹೇಳತಕ್ಕಂಥದ್ದು ಬೆಳಿಗ್ಗೆ ಮೋಷನ್ನನ್ನು ಮೂವ್ ಮಾಡಿದಾಗ...

ಶ್ರೀ ಡಿ.ಬಿ. ಚಂದ್ರೇಗೌಡ : ಅದಕ್ಕೂ ಇದಕ್ಕೂ ಏನು ಸಂಬಂಧ?

ಶ್ರೀ ಶಿವಾನಂದ ಪಾಟೀಲ್ : ಸಂಬಂಧ ಇಲ್ಲ. ಆದರೆ ನಮಗೆ ಆಸೆ ಇಷ್ಟೆ. ನಿಮ್ಮಿಂದಾದರೂ ಒಂದು ಆದೇಶ ಬರಲಿ ಎಂದು ಅಷ್ಟೆ. scope of discussion ಇರಲಿ; ಅದನ್ನು ಕರ್ಟೈಲ್ ಮಾಡುವುದು ಬೇಡ.

ಶ್ರೀ ಡಿ.ಬಿ. ಚಂದ್ರೇಗೌಡ : ರೂಲ್ಸ್ ಬುಕ್ ನಲ್ಲಿ ಅಮೆಂಡ್ ಮಾಡಿ...

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಉಪಾಧ್ಯಕ್ಷರೇ, ಈಗ ಸಂವಿಧಾನ ತಿದ್ದುಪಡಿ ಬಗ್ಗೆ ಅದಕ್ಕೆ ಪೂರಕವಾಗಿ ನಾವು ಪಾರ್ಲಿಮೆಂಟ್‌ಗೆ ಅಧಿಕಾರವನ್ನು ಕೊಡುವುದಕ್ಕೆ ಇಲ್ಲ ಪಾಸ್ ಮಾಡುವಂಥದ್ದು. ಈಗಾಗಲೇ ರೆಸಿಡ್ಯೂಯರಿ ಪವರ್‌ನಲ್ಲಿ ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಸರ್ವೀಸ್ ಟ್ಯಾಕ್ಸ್‌ಗಳನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಈಗ ನೀವು ಸರ್ವೀಸ್ ಟ್ಯಾಕ್ಸ್‌ನ್ನು ಏರ್‌ಟೆಲ್ ಬಿಲ್‌ನಲ್ಲಿ ನೋಡಬಹುದು. ಅದನ್ನು ನಾವು ರಾಜ್ಯ ಸರ್ಕಾರಕ್ಕೆ ಎಷ್ಟು ಪಾಲು ಬರುತ್ತದೆ, ಕೇಂದ್ರಕ್ಕೆ ಎಷ್ಟು ಪಾಲು ಹೋಗುತ್ತದೆ ಎಂದು ನೋಡಬೇಕಾಗುತ್ತದೆ. ಅದನ್ನು ಮಾಡುವುದಕ್ಕೆ ಸಂಪೂರ್ಣವಾಗಿ ಈಗ ಇದಾದಮೇಲೆ ಮುಖ್ಯಮಂತ್ರಿಗಳು ಎಲ್ಲಾ ಸಭೆ ಸೇರಿ ಇದನ್ನು ತೀರ್ಮಾನ ಮಾಡುತ್ತಾರೆಂದು ಕಾಣುತ್ತದೆ. ಒಂದು ವೇಳೆ ಸಂಪೂರ್ಣವಾಗಿ ಕೇಂದ್ರ ಸರ್ಕಾರದವರೇ ತೆಗೆದುಕೊಳ್ಳುವ ದೃಷ್ಟಿಯಿಂದ ಇದು ಯೂನಿಯನ್ ಲಿಸ್ಟ್‌ಗೆ ಹೋಗುವಂಥದ್ದಲ್ಲ. 50+50 ಆಗುತ್ತದೆಯೇ? ಅಥವಾ 75+25 ಆಗುತ್ತದೆಯೇ? ಇದರ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ಏಕೆಂದರೆ ಎಲ್ಲವೂ ನಡೆಯುವುದು ರಾಜ್ಯಸರ್ಕಾರದ ಮುಖಾಂತರವೇ. ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಹೆಚ್ಚು ಈ ಪಾಲು ಬರಬೇಕು ಎನ್ನುವಂಥದ್ದು ನಮ್ಮೆಲ್ಲರ ಆಸೆ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ನಾವೇನು ಒಪ್ಪಿಗೆಯನ್ನು ಕೊಡುತ್ತೇವೆ, ನಂತರದ ಮುಂದಿನ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಸಭೆ ಏನು ನಡೆಯುತ್ತದೆ, ಅದರಲ್ಲಿ ನಮ್ಮ ಮುಖ್ಯಮಂತ್ರಿಗಳು ಕೇಂದ್ರಕ್ಕಿಂತ ರಾಜ್ಯ ಸರ್ಕಾರಕ್ಕೆ ಹೆಚ್ಚು ಪಾಲನ್ನು ಕೊಡುವುದರ ಬಗ್ಗೆ ಚರ್ಚೆಯನ್ನು ಮಾಡಲಿಕ್ಕೆ ನಾವು ತಮ್ಮ ಮುಖಾಂತರ ಸರ್ಕಾರಕ್ಕೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ (ಬೀರೂರು) : ಮಾನ್ಯ ಉಪಾಧ್ಯಕ್ಷರೇ, ಸಂಸದೀಯ ವ್ಯವಹಾರಗಳ ಸಚಿವರಿಂದ ಒಂದು ಸಣ್ಣ ಕ್ಲಾರಿಫಿಕೇಷನ್ನನ್ನು ಕೇಳುವುದಕ್ಕೆ ನಾನು ಇಷ್ಟಪಡುತ್ತೇನೆ. 1995ನೇ ಇಸವಿಯಿಂದ ಈ ಸರ್ವೀಸ್ ಟ್ಯಾಕ್ಸ್‌ನ್ನು ಯಾವ ರೀತಿ ಲೀಗಲೈಜ್ ಮಾಡಬೇಕೆನ್ನುವುದರ ಬಗ್ಗೆ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡುತ್ತಾರೆ. ಎಕ್ಸ್ ಪರ್ಟ್ ಕಮಿಟಿ ವರದಿಯ ಆಧಾರದ ಮೇಲೆ ಈ ಕಾನ್ಸ್ ಟಿಟ್ಯೂಷನ್ ಅಮೆಂಡ್ ಮೆಂಟ್ ಬಿಲ್ಲನ್ನು ಅವರು ಮೂವ್ ಮಾಡಿದ್ದಾರೆ. ಅದಕ್ಕೆ ನಾವು ಒಪ್ಪಿಗೆಯನ್ನು ಕೊಡುತ್ತೇವೆ. ಇದರ ಬಗ್ಗೆ ನಮಗೆ ಒಂದು ಕ್ಲಾರಿಫಿಕೇಷನ್ ಬೇಕಾಗುತ್ತದೆ. ಈ ಸರ್ವೀಸ್ ಟ್ಯಾಕ್ಸ್ ಯೂನಿಯನ್ ಲಿಸ್ಟ್‌ಗೆ ಸೇರುತ್ತದೋ ಅಥವಾ ಕನ್‌ಕರೆಂಟ್ ಲಿಸ್ಟ್‌ಗೆ ಸೇರುತ್ತದೋ ಎನ್ನುವುದು ಬೇಕಾಗುತ್ತದೆ. ಒಂದು ಸಾರಿ ಇದು ಯೂನಿಯನ್ ಲಿಸ್ಟ್‌ಗೆ ಸೇರಿದರೆ ನಮಗೇನೂ ಅವಕಾಶವೇ ಇರುವುದಿಲ್ಲ. ಅವರು 50 ಪರ್‌ಸೆಂಟ್ ಕೊಟರೂ ತೆಗೆದುಕೊಳ್ಳಬೇಕು. 10 ಪರ್‌ಸೆಂಟ್ ಕೊಟ್ಟರೂ ತೆಗೆದುಕೊಳ್ಳಬೇಕು. ಕೊಡದಿದ್ದರೂ ಸುಮ್ಮನೆ ಇರಬೇಕಾಗುತ್ತದೆ. ಆ ರೀತಿಯ ವಾತಾವರಣ ನಿರ್ಮಾಣವಾಗುತ್ತದೆ. ಅದಕ್ಕೆ ನಮಗೆ ಬೇಕಾಗಿರುವುದೇನೆಂದರೆ, ಇದು ಯಾವ ಲಿಸ್ಟ್‌ಗೆ ಸೇರುತ್ತದೆ, ಅದರಿಂದ ಮುಂದೆ ನಮಗೆ ಯಾವ ರೀತಿ ಅನುಕೂಲವಾಗುತ್ತದೆ

ಎನ್ನತಕ್ಕಂಥದ್ದರ ಬಗ್ಗೆ ಸಂಸದೀಯ ವ್ಯವಹಾರಗಳ ಸಚಿವರು ಹೇಳಿದರೆ ನಮಗೆ ಅನುಕೂಲವಾಗುತ್ತದೆ ಎಂದು ಅಷ್ಟೇ ನನ್ನ ಕ್ಲಾರಿಫಿಕೇಷನ್.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಉಪಾಧ್ಯಕ್ಷರೇ, ಈ ಸಂವಿಧಾನದ ತಿದ್ದುಪಡಿಗೆ ಎರಡು ಕಾರಣಗಳಿಂದ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಮೊದಲನೆಯದು, ಲೋಕಸಭೆಯಲ್ಲಿ ನಮ್ಮ ಪಕ್ಷ ಇದಕ್ಕೆ ಸಂಪೂರ್ಣ ಸಹಮತವನ್ನು ನೀಡಿದೆ. ಎರಡನೆಯದು, ಈ the concept of taxing the services was originally initiated in the year 1994-95, when Dr. Man Mohan Singh was the Finance Minister of this country. ಆದ್ದರಿಂದ ಏನು ಸರ್ವೀಸ್ ಟ್ಯಾಕ್ಸ್ ಹಾಕತಕ್ಕಂಥ ಕಾನ್‌ಸೆಪ್ಟ್ ಇದೆ, that was initiated by Congress Government and that to when Dr. ManMohan Singh was the Finance Minister of this country. ಈ ಎರಡು ಕಾರಣಗಳಿಂದ ನಾನು ಈ ಒಂದು ಸಂವಿಧಾನ ತಿದ್ದುಪಡಿಗೆ ಸಂಪೂರ್ಣವಾದಂಥ ಸಹಮತವನ್ನು ನೀಡುವುದರ ಜೊತೆಗೆ ಇವತ್ತು ಈ ಸರ್ವೀಸ್ ಸೆಕ್ಟಾರ್ಸ್‌ನಲ್ಲಿ ಟ್ಯಾಕ್ಸ್ ಹಾಕತಕ್ಕಂಥದ್ದು ಬಹಳ ಅತ್ಯಗತ್ಯ. ಇತ್ತೀಚಿನ ದಿನಗಳಲ್ಲಿ ಈ ಒಂದು ಸೆಕ್ಟಾರ್ ಏನಿತ್ತು, ಅದು ಈ ಕರದಿಂದ ಆಲ್‌ಮೋಸ್ಟ್ ವಿಮುಕ್ತಿಯಾಗತಕ್ಕಂಥ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೆವು. The undisputed fact is that, we don't have this tax paying culture. we always try to escape from the clutches of paying the tax. That is the culture. ಇಂಥ ಸಂದರ್ಭಗಳಲ್ಲಿ ಈ ಒಂದು ಸರ್ವೀಸ್ ಟ್ಯಾಕ್ಸ್‌ನ್ನು ತರತಕ್ಕಂಥ ದಿಸೆಯಲ್ಲಿ ಇವತ್ತು ಏನು ಸಂವಿಧಾನ ತಿದ್ದುಪಡಿಯನ್ನು ತಂದಿದ್ದಾರೆ, ಅದಕ್ಕೆ ನಾನು ಸಂಪೂರ್ಣ ಸಹಮತವನ್ನು ವ್ಯಕ್ತಪಡಿಸಿ, ಇದಕ್ಕೆ ಕಾನ್‌ಸಿಕ್ವೆನ್ಸಿಯಲ್ ಆಗಿ ಒಂದು ಬಿಲ್‌ನ್ನು ತರಬೇಕಾಗುತ್ತದೆ. ಅಂದರೆ, ಸರ್ವೀಸ್ ಟ್ಯಾಕ್ಸ್ ಬಿಲ್ಲನ್ನು ತರಬೇಕಾಗುತ್ತದೆ. By bringing this amendment alone, we cannot impose tax. Consequentially, the Parliament has to bring a Legislation and they must name that as service sector bill- ಎಂದು ಹೇಳಿ ತಂದು, ಅದರಲ್ಲಿ ಯಾವ ರೀತಿ ಯಾವ ಯಾವ ಸರ್ವೀಸಸ್‌ನ್ನು ಟ್ಯಾಕ್ಸ್ ಮಾಡಬೇಕು, ಎಷ್ಟೆಷ್ಟು ಟ್ಯಾಕ್ಸ್ ಮಾಡಬೇಕು ಎನ್ನುವುದಕ್ಕೆ ಸಂಪೂರ್ಣವಾಗಿ they must bring some comprehensive legislation for that. That is very much important. ಅದರಲ್ಲಿ ಏನು ನಮಗೆ ಅನುಮಾನಗಳನ್ನು ನಾವು ವ್ಯಕ್ತಪಡಿಸುತ್ತಿದ್ದೇವೆಂದರೆ ಅಂಥ ಸಂದರ್ಭದಲ್ಲಿ ಇವತ್ತು ಕೇಂದ್ರ ಸರ್ಕಾರದವರು ಈ ಕಾಂಪ್ರಹೆನ್ಸೀವ್ ಲೆಜಿಸ್ಲೇಷನ್ನನ್ನು ತರತಕ್ಕಂಥ ಸಂದರ್ಭದಲ್ಲಿ ರಾಜ್ಯಗಳ ಹಿತಾಸಕ್ತಿಯನ್ನು ಕಾಪಾಡತಕ್ಕಂಥ ಕೆಲಸವಾಗಬೇಕು. ಇದು ಏನಾಗುತ್ತದೆ, ಸರ್ವೀಸ್ ಸೆಕ್ಟಾರ್ ಇವತ್ತು ದೇಶದಾದ್ಯಂತ ಎಲ್ಲಾ ಕಡೆಯೂ ಇರತಕ್ಕಂಥದ್ದು; ಇವತ್ತು ಬಹಳ ಪ್ರಮುಖವಾಗಿರತಕ್ಕಂಥ ಸೆಕ್ಟಾರ್. ಅದರಿಂದ ಇಂಥದ್ದಕ್ಕೆ ಟ್ಯಾಕ್ಸ್‌ನ್ನು ಹಾಕತಕ್ಕಂಥ ಸಂದರ್ಭದಲ್ಲಿ the centre must keep the interest of the States into consideration and while making the apportionment, they must give atleast minimum 70-75% of the tax collected under this sector to the States. Then only, the purpose for which this amendment is brought, I think that

will be met. ಆದ್ದರಿಂದ ಇವತ್ತು ಈ ಕಾನ್‌ಸೆಕ್ವೆನ್ಸಿಯಲ್ ಲೆಜಿಸ್ ಲೇಷನ್ನನ್ನು ತರತಕ್ಕ ಸಂದರ್ಭದಲ್ಲಿ, ಕೇಂದ್ರ ಸರ್ಕಾರವು ರಾಜ್ಯಗಳ ಹಿತವನ್ನು ಕಾಪಾಡತಕ್ಕ ದಿಸೆಯಲ್ಲಿ ಇವತ್ತು ಹೆಚ್ಚು ಶೇರನ್ನು ನಮ್ಮ ರಾಜ್ಯಗಳಿಗೆ ಕೊಡತಕ್ಕಂಥ ಒಂದು ಕೆಲಸವಾಗಬೇಕಾಗುತ್ತದೆ. ಆದ್ದರಿಂದ ಒಟ್ಟಾರೆ ಈ ಒಂದು ತಿದ್ದುಪಡಿ ಬಹಳ ಅತ್ಯಾವಶ್ಯಕ ಆಗಿದೆ. ಇವತ್ತು ಬದಲಾದಂತಹ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಯಲ್ಲಿ ಅಂದರೆ ದೇಶದಲ್ಲಿ ಬದಲಾಗುತ್ತಿರತಕ್ಕಂಥ ಆರ್ಥಿಕ ಪರಿಸ್ಥಿತಿಯಲ್ಲಿ ಅದರಲ್ಲೂ ಕೂಡ ಈ ರಾಜ್ಯಗಳು, the fiscal position of the States and the Central Government is very bad. One has to fairly concede that. Under such circumstances, I think this is absolutely needed. Therefore, I fully support this constitutional Amendment. Thank you sir.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು 2–3 ಕ್ಲಾರಿಫಿಕೇಶನ್ ಗಳನ್ನು ಕೇಳಿದ್ದಾರೆ. ಬಹಳ ಮುಖ್ಯವಾಗಿ ಮತ್ತು ಕೊನೆಯದಾಗಿ, After the Constitutional Amendment Act is published in the Parliament, Parliament has to pass a legislation to provide for devolution of taxes. ಒಮ್ಮೆ ಅಲ್ಲಿ ಮಾನ್ಯ ಗೌಡರು ಹೇಳಿದ ಹಾಗೆ ಇದು ಮಂಜೂರಾದ ಮೇಲೆ ಮತ್ತೊಂದು ಶಾಸನವನ್ನು ಸಂಸತ್ತಿನಲ್ಲಿ ಮಂಡಿಸಿ ಅಲ್ಲಿ ರಾಜ್ಯಗಳ ಪಾಲು ಎಷ್ಟು, ಕೇಂದ್ರಗಳ ಪಾಲು ಎಷ್ಟು ಎನ್ನುವಂತಹ ಹಂಚಿಕೆ ವ್ಯವಸ್ಥೆ ಅಲ್ಲಿ ಆಗಬೇಕು. ಈ ಸರ್ವೀಸ್ ಟ್ಯಾಕ್ಸ್‌ನ್ನು ಕೇಂದ್ರ ಸರ್ಕಾರ ಲೆವಿ ಮಾಡುತ್ತದೆ. ಆದರೆ ವಸೂಲಿ ಮಾಡತಕ್ಕ ಕೆಲಸವನ್ನು ಕೇಂದ್ರ ಸರ್ಕಾರ ಬೇಕಾದರೂ ಮಾಡಬಹುದು, ರಾಜ್ಯ ಸರ್ಕಾರ ಬೇಕಾದರೂ ಮಾಡಬಹುದು. ರಾಜ್ಯ ಸರ್ಕಾರಕ್ಕೆ ವಸೂಲಿ ಮಾಡುವ ಅಧಿಕಾರವನ್ನು ಕೊಟ್ಟರೆ ನಮ್ಮ ಪಾಲನ್ನು ನಿಗದಿ ಮಾಡಿಕೊಳ್ಳುವುದಕ್ಕೆ ಸ್ವಲ್ಪ ಮಟ್ಟಿಗೆ ಅನುಕೂಲವಾಗುತ್ತದೆ. ವಸೂಲು ಆದದ್ದನ್ನೆಲ್ಲಾ ಕೇಂದ್ರಕ್ಕೆ ಕಟ್ಟಬೇಕು ಎಂದು ಏನಿಲ್ಲ. ಸ್ವಲ್ಪ ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬಹುದು. ಬಹಳ ಮುಖ್ಯವಾದ ಪ್ರಶ್ನೆ ಎಂದರೆ ಯಾವ ಲಿಸ್ಟ್‌ಗೆ ಬರುತ್ತದೆ ಎಂದು ನಮ್ಮ ಮಾನ್ಯ ಮಲ್ಲಿಕಾರ್ಜುನ್ ಅವರ ಪ್ರಶ್ನೆ. ಇದು ನ್ಯಾಚುರಲಿ ಸೆಂಟ್ರಲ್ ಲಿಸ್ಟ್‌ಗೇ ಬರುವುದು. ಏಕೆಂದರೆ ಲೆವಿ ಮಾಡುವಂತಹ ಅಧಿಕಾರ ಅವರಿಗೇ ಇರುವುದು. ಆದ್ದರಿಂದ ಈ ಸ್ಟೇಟ್ ಲಿಸ್ಟ್‌ನಲ್ಲಿ ಆಗಲೀ, ಸೆಂಟ್ರಲ್ ಲಿಸ್ಟ್ ನಲ್ಲಿ ಆಗಲೀ ಇರಲಿಲ್ಲ. ಆದರೆ ಎಂಟ್ರಿ 97ರಲ್ಲಿ ಇತ್ತು. ಆದ್ದರಿಂದ ಅವರಿಗೆ ತೆರಿಗೆ ಹಾಕತಕ್ಕ ಅಧಿಕಾರವನ್ನು ಕೊಡಬೇಕು, ತೆರಿಗೆ ಹಾಕುವ ಶಾಸನವನ್ನು ರಚನೆ ಮಾಡುವುದಕ್ಕೆ ಕೂಡ ಕೇಂದ್ರ ಸರ್ಕಾರಕ್ಕೆ ಅಧಿಕಾರವನ್ನು ಕೊಡಬೇಕು ಎನ್ನುವ ಸದಿಚ್ಛೆಯಿಂದ ಇದನ್ನು ತಂದಿದ್ದಾರೆ. ನಾನು ಮೊದಲೇ ಹೇಳಿದ ಹಾಗೆ ಈಗಲೇ ನಾವು ನಮ್ಮ ಪಾಲು ಎಷ್ಟು ಬರುತ್ತದೆ ಎಂದು ಹೇಳಿ ನಿರ್ಧಾರ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ ನಮ್ಮ ಪಾಲನ್ನು ಕೇಳುವುದಕ್ಕೆ ಎಷ್ಟು ಸಾಧ್ಯವೋ ಅಷ್ಟನ್ನು ಕೇಳತಕ್ಕ ಪ್ರಾಮಾಣಿಕ ಪ್ರಯತ್ನವನ್ನು ರಾಜ್ಯ ಸರ್ಕಾರ ನಿಷ್ಪಕ್ಷಪಾತದಿಂದ ಮಾಡುತ್ತದೆ. ನಮ್ಮ ಸಂಸತ್ ಸದಸ್ಯರೂ ಕೂಡ ಇದಕ್ಕೆ ಸ್ವಲ್ಪ ಹೆಚ್ಚಾಗಿ ಪ್ರಯತ್ನ ಮಾಡಿದರೆ ಇನ್ನೂ ಹೆಚ್ಚು ರಾಜ್ಯಗಳ ಪಾಲನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಸರಿಸುಮಾರು 8 ರಿಂದ 10 ಸಾವಿರ ಕೋಟಿ ರೂಪಾಯಿಗಳವರೆಗೂ ಬರಬಹುದು ಎನ್ನುವಂತಹ

ಒಂದು ನಿರೀಕ್ಷೆ ಸರ್ವೀಸ್ ಸೆಕ್ಟಾರ್‌ನಲ್ಲಿ ಇದೆ. ಆ ಸರ್ವೀಸ್ ಸೆಕ್ಟಾರ್ ಎಂದರೆ ಬಹಳ ವಿಶಾಲವಾದುದು. ಈಗ ಹೋಗುತ್ತಾ ಹೋಗುತ್ತಾ ಸುಮಾರು 60 ರಿಂದ 70 ಐಟಂಗಳು ಅದರ ವ್ಯಾಪ್ತಿಯಲ್ಲಿ ಬರುತ್ತವೆ. ಈಗ ರೈಲ್ವೇಸ್ ಮೇಲೆ ಹಾಕಿದ ತೆರಿಗೆ ನಮಗೆ ಬರುವುದಿಲ್ಲ. ಟೆಲಿಫೋನ್ ಮೇಲೆ ಹಾಕಿದ ತೆರಿಗೆ ನಮಗೆ ಬರುವುದಿಲ್ಲ. ಇನ್‌ಶ್ಯೂರೆನ್ಸ್ ಮೇಲೆ ಹಾಕಿದ ತೆರಿಗೆ ನಮಗೆ ಬರುವುದಿಲ್ಲ. ಈಗ ಕೇಳುವ ಅಧಿಕಾರ ರಾಜ್ಯ ಸರ್ಕಾರಕ್ಕೂ ಬರುತ್ತದೆ. ಅಂದರೆ ಈ ಒಂದು ಮಸೂದೆ ಆದಮೇಲೆ ಆ ಅಧಿಕಾರ ಬರುತ್ತದೆ. ಆದ್ದರಿಂದ ಶ್ರೀಮಾನ್ ಸಿಂಧ್ಯಾ ಅವರು ಹೇಳಿದ ಹಾಗೆ ಇದು ರಾಜ್ಯಗಳಿಗೇ ಲಾಭ. ಆದ್ದರಿಂದ ಇಲ್ಲಿ ಮುಂಚೆ ಲಾಭವನ್ನು ಹೇಗೆ ತೆಗೆದುಕೊಳ್ಳುವುದು ಎನ್ನುವಂತಹ ನಿಮ್ಮ ಶಂಕೆ ಏನು ಇದೆ, ಅದನ್ನು ಯಶಸ್ವಿಯಾಗಿ ಮಾಡಿಕೊಡುತ್ತೇವೆ ಎನ್ನುವಂತಹ ವಿಶ್ವಾಸವನ್ನು ವ್ಯಕ್ತಪಡಿಸಿ ಈ ಒಂದು ಠರಾವಿಗೆ ಸಭೆಯು ಒಪ್ಪಿಗೆ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಪ್ರಸ್ತಾವದ ಅಂಗೀಕಾರ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ

"ಸಂಸತ್ತಿನ ಎರಡೂ ಸದನಗಳ ಮೂಲಕ ಅಂಗೀಕರಿಸಲಾದಂತೆ ಸಂವಿಧಾನ (ತೊಂಭತ್ತೈದನೇ ತಿದ್ದುಪಡಿ) ವಿಧೇಯಕ, 2003ರಲ್ಲಿ ಮಾಡಲು ಉದ್ದೇಶಿಸಿರುವ, ಭಾರತ ಸಂವಿಧಾನದ 368ನೇ ಅನುಚ್ಛೇದ (2)ನೇ ಖಂಡದ ಪರಂತುಕದ (ಸಿ) ಖಂಡದ ವ್ಯಾಪ್ತಿಯೊಳಗೆ ಬರುವ ತಿದ್ದುಪಡಿಗಳನ್ನು ಈ ಸದನವು ಅಂಗೀಕರಿಸುತ್ತದೆ."

ಸಂವಿಧಾನ ತಿದ್ದುಪಡಿ ಸ್ಥಿರೀಕರಣ ನಿರ್ಣಯ ಸರ್ವಾನುಮತದಿಂದ ಅಂಗೀಕೃತವಾಯಿತು.

9. ಪ್ರಕಟಣೆ

ಪುಸ್ತಕ ಬಿಡುಗಡೆ ಸಮಾರಂಭ

ಮಾನ್ಯ ಉಪಾಧ್ಯಕ್ಷರು : ವಿಧಾನ ಮಂಡಲದ ಗ್ರಂಥಾಲಯ ಉಪ ಸಮಿತಿಯ ವತಿಯಿಂದ ರಾಜ್ಯದ ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹ ಮಾಲಿಕೆಯಡಿಯಲ್ಲಿ ಸಿದ್ಧಪಡಿಸಲಾಗಿರುವ ಶ್ರೀ ಬಿ.ಡಿ. ಜತ್ತಿ, ಶ್ರೀ ಆರ್. ಗುಂಡೂರಾವ್, ಶ್ರೀ ಕೆ.ಹೆಚ್. ಪಾಟೀಲ್, ಶ್ರೀ ಅಜೀಜ್ ಸೇಠ್ ಮತ್ತು ಶ್ರೀ ಸಿ.ಎಂ. ಆರ್ಮುಗಂ ಅವರುಗಳ ಪುಸ್ತಕಗಳನ್ನು ಈ ದಿನ ಸಂಜೆ 6.00 ಘಂಟೆಗೆ ವಿಧಾನಸೌಧದ 3ನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ರಾಜ್ಯದ ಘನತೆವೆತ್ತ ರಾಜ್ಯಪಾಲರು ಮತ್ತು ಸನ್ಮಾನ್ಯ ಮುಖ್ಯಮಂತ್ರಿಯವರ ಸಮ್ಮುಖದಲ್ಲಿ ಬಿಡುಗಡೆ ಮಾಡಲಾಗುವುದು. ಮಾನ್ಯ ಸದಸ್ಯರುಗಳಿಗೆ ಹಾಗೂ ಪತ್ರಿಕಾ ಬಳಗದವರಿಗೆ ಆಮಂತ್ರಣ ಪತ್ರಿಕೆಗಳನ್ನು ಪ್ರತ್ಯೇಕವಾಗಿ ಕಳುಹಿಸಿಕೊಡಲಾಗಿರುತ್ತದೆ. ಸದರಿ ಸಮಾರಂಭದ ಮುನ್ನ ಸಂಜೆ 5.15ಕ್ಕೆ ಲಘು ಉಪಹಾರವನ್ನು ಏರ್ಪಡಿಸಲಾಗಿದ್ದು, ಸನ್ಮಾನ್ಯ ರಾಜ್ಯಪಾಲರು ಸಮಾರಂಭಕ್ಕೆ ಆಗಮಿಸುವ ಮುನ್ನ ಸದಸ್ಯರೆಲ್ಲಾ ಲಘು ಉಪಹಾರವನ್ನು ಸ್ವೀಕರಿಸಿ ಸಮ್ಮೇಳನ ಸಭಾಂಗಣದಲ್ಲಿ ಉಪಸ್ಥಿತರಿದ್ದು, ಪುಸ್ತಕ ಬಿಡುಗಡೆ ಸಮಾರಂಭ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಕೋರುತ್ತೇನೆ.